**ಓ.ಎಸ್. ನಂ. 713/2014 ಪಿ.ಡಬ್ಲೂ-1 ಹೆಸರು - ಪಿ.ರಾಜೇಶ**

**ಸಾಕ್ಷಿಯನ್ನು ದಿನಾಂಕಃ 10/03/2023 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಶ್ರೀ. ಕೆ.ಎಸ್.ಕೆ. ಪ್ರತಿವಾದಿ ಪರ ವಕೀಲರಿಂದಃ-**

3 ನೇ ಪ್ರತಿವಾದಿಯು 1 ನೇ ಪ್ರತಿವಾದಿಯ ತಂಗಿ. 1 ನೇ ಪ್ರತಿವಾದಿಯ ತಾತನ ಹೆಸರು ನಂಜಿ ಮಾದಯ್ಯ. ನಂಜಿ ಮಾದಯ್ಯನಿಗೆ 7 ಜನ ಮಕ್ಕಳು. ನನ್ನ ತಾತನ ಹೆಸರು ಬಸವ. ನನ್ನ ತಾತ ಬಸವ ಮತ್ತು ನಂಜಿ ಮಾದಯ್ಯ ಅಣ್ಣತಮ್ಮಂದಿರ ಮಕ್ಕಳು. ದಾವಾ ಸ್ವತ್ತು ಮೂಲತಃ ನನ್ನ ತಾತ ಬಸವ ರವರಿಗೆ ಸೇರಿದ್ದಾಗಿರುತ್ತದೆ. 1 ನೇ ಪ್ರತಿವಾದಿಗೆ 3 ಆಸ್ತಿಗಳು ಇವೆ. ನನ್ನ ತಾತ ಬಸವ ರವರಿಗೆ ಇಬ್ಬರು ಹೆಣ್ಣು ಮಕ್ಕಳು ಅವರ ಹೆಸರು ಪುಟ್ಟಮಾದಮ್ಮ ಮತ್ತು ಮನಿಯಮ್ಮ. ಪುಟ್ಟಮಾದಮ್ಮ ಮದುವೆಯಾಗಿರಲಿಲ್ಲ. ನನ್ನ ತಂದೆ ಮನಿಯಮ್ಮರವರ ಮಗ. ದಾವಾ ಸ್ವತ್ತು ನನ್ನ ತಾತ ಬಸವ ರವರ ಹೆಸರಿನಲ್ಲಿಯೇ ಇತ್ತು. ನನ್ನ ಅಜ್ಜಿ ಮನಿಯಮ್ಮರವರಿಗೆ ನನ್ನ ತಂದೆ ಮತ್ತು 6 ಜನ ಹೆಣ್ಣು ಮಕ್ಕಳು. ನನ್ನ ಅಜ್ಜಿ ಮನಿಯಮ್ಮ ಮತ್ತು ನನ್ನ ಅಜ್ಜ ಮೂಗಯ್ಯ @ ವರದಯ್ಯ ಇಬ್ಬರು ಮೃತಪಟ್ಟಿದ್ದಾರೆ. ನನ್ನ ಅಜ್ಜಿ ಮನಿಯಮ್ಮ ಅವರ ಜೀವಿತ ಕಾಲದಲ್ಲಿ ದಾವಾ ಸ್ವತ್ತಿಗೆ ಸಂಬಂಧಪಟ್ಟಂತೆ ಯಾವುದೇ ದಾಖಲಾತಿ ಮಾಡಿರಲಿಲ್ಲ. ದಾವಾ ಸ್ವತ್ತು ಮನಿಯಮ್ಮ ಕುಟುಂಬಕ್ಕೆ ಸೇರಿದ ಸ್ವತ್ತು. ಮನಿಯಮ್ಮನ 6 ಜನ ಹೆಣ್ಣು ಮಕ್ಕಳ ಪೈಕಿ ಒಬ್ಬರು ಮಾತ್ರ ಬದುಕಿದ್ದಾರೆ ಅವರ ಹೆಸರು ಹುಚ್ಚಮ್ಮ @ ಹೊಂಬಾಳಮ್ಮ. ಮನಿಯಮ್ಮನ ಉಳಿಕೆ 5 ಜನ ಹೆಣ್ಣು ಮಕ್ಕಳು ಮದುವೆಯಾಗಿದ್ದರು. ಅವರ ಗಂಡಂದಿರು ತೀರಿಕೊಂಡಿದ್ದು ಅವರ ಮಕ್ಕಳು ಇದ್ದಾರೆ. ಮನಿಯಮ್ಮನ ಉಳಿಕೆ ವಾರಸುದಾರರನ್ನು ಪಕ್ಷಗಾರರನ್ನಾಗಿ ಮಾಡಿರದೇ ಇರುವುದರಿಂದ ನನ್ನ ದಾವೆ ಊರ್ಜಿತವಲ್ಲ ಎಂದರೆ ಸರಿಯಲ್ಲ. ದಾವಾ ಸ್ವತ್ತಿನ ಮಾರುಕಟ್ಟೆ ಬೆಲೆ 1 ಚದರ ಅಡಿಗೆ 400/- ರೂ. ದಾವಾ ಸ್ವತ್ತಿನ ಈಗಿನ ಮಾರುಕಟ್ಟೆ ಬೆಲೆ ಸುಮಾರು 10,00,000/- ಕ್ಕಿಂತ ಹೆಚ್ಚಿದೆ ಎಂದರೆ ಸರಿಯಲ್ಲ.

ದಾವಾ ಆಸ್ತಿಯ ಪೂರ್ವಕ್ಕೆಃ ರಾಚಮ್ಮ ನವರ ಸೈಟು ಇದೆ, ಪಶ್ಚಿಮಕ್ಕೆಃ ಹುಚ್ಚ ಮಯಿಗಯ್ಯ ರವರ ಆಸ್ತಿ, ಉತ್ತರಕ್ಕೆಃ ಜವರಯ್ಯ ರವರ ಆಸ್ತಿ, ದಕ್ಷಿಣಕ್ಕೆಃ ರಸ್ತೆ. ದಾವಾ ಸ್ವತ್ತಿಗೆ ಸಂಬಂಧಿಸಿದಂತೆ ನನ್ನ ಅಜ್ಜ ಬಸವನ ಹೆಸರಿನಲ್ಲಿ ಇರುವ ದಾಖಲಾತಿಗಳನ್ನು ಹಾಜರುಪಡಿಸಿದ್ದೇನೆ. ದಾಖಲಾತಿಗಳನ್ನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ.

( ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದು, ಸಮಯ ನೀಡಲಾಯಿತು.)

ನನ್ನ ಉಕ್ತಲೇಖನದ ಮೇರೆಗೆ ತೆರದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.

**ಓ ಹೇ ಕೇ ಸ ಇದೆ ಎಂ ಒ**

ಸಹಿ/-

**1ನೇ ಹೆಚ್ಚುವರಿ ಸಿ.ಜೆ ಮತ್ತು ಪ್ರದನ್ಯಾದಂ**

**ನಂಜನಗೂಡು**